ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/22/ಸಿಡಿಸಿ(2)/2023(1043364)

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:13/03/2023.

## ಸುತ್ತೋಲೆ

ವಿಷಯ :- 2023-24 ನೇ ಸಾಲಿಗೆ ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್ / ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಬಯಸುವ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ವರ್ಗದವರುಗಳ ವಿವರಗಳನ್ನು ಸಲ್ಲಿಸುವ ಬಗ್ಗೆ.

-0-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರು 2023-24 ನೇ ಸಾಲಿಗೆ ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್/ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಬಯಸಿದಲ್ಲಿ ಗೂಗಲ್ ಫಾರ್ಮ್ ನಲ್ಲಿ ತಮ್ಮ ವಿವರಗಳನ್ನು ಭರ್ತಿ ಮಾಡಿ, **ದಿನಾಂಕ: 16/03/2023** ರೊಳಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್/ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಬಯಸಿ, ಗೂಗಲ್ ಫಾರ್ಮ್‌ನಲ್ಲಿ ಬಂದಂತಹ ಮಾಹಿತಿ ಅನ್ವಯ ವಿಭಾಗಾವಾರು ಉಪನ್ಯಾಸಕರ / ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಅದರಂತೆ ನಿಯಮಾನುಸಾರ ಶೇಕಡ 5 ಅನ್ನು ಮೀರದಂತೆ, ಅರ್ಹ ಬೋಧಕ ವರ್ಗದವರಿಗೆ 2023-24 ನೇ ಸಾಲಿಗೆ ಉನ್ನತ ಶಿಕ್ಷಣಕ್ಕೆ ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು ಮತ್ತು ಸಂದರ್ಶನಕ್ಕೆ ಹಾಜರಾಗಲು ನಿರಾಕ್ಷೇಪಣಾ ಪತ್ರವನ್ನು ನೀಡಲಾಗುವುದು. ಗೂಗಲ್ ಫಾರ್ಮ್‌ನಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ಬಯಸಿ ವಿವರಗಳನ್ನು ಸಲ್ಲಿಸದೆ, ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಕೆ.ಸಿ.ಎಸ್ ನಿಯಮ 61(3)ರ ಅಪೆಂಡೆಕ್ಸ್-II 'ಎ' ನಿಯಮ I ರ ಉಪನಿಯಮ(1) ರಿಂದ (10)ರನ್ವಯ ಸರ್ಕಾರಿ ನೌಕರರನ್ನು ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್/ಎಂ.ಇ/ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ನಿಯೋಜನೆಯನ್ನು ಈ ಕೆಳಕಂಡ ಅಂಶಗಳನ್ವಯ ಸರ್ಕಾರದ ಹಂತದಲ್ಲಿಯೇ ಮಾಡಲಾಗುವುದು.

1. ಎಂ.ಟೆಕ್/ಪಿಹೆಚ್.ಡಿ ಉನ್ನತ ವ್ಯಾಸಂಗ ಮಾಡಲು ಬಯಸುವ ಬೋಧಕ ವರ್ಗದವರು ಕನಿಷ್ಠ 5 ವರ್ಷಗಳ ನಿರಂತರ/ಸಕ್ರಮ ಸೇವೆಯನ್ನು ಸಲ್ಲಿಸಿರಬೇಕು ಹಾಗೂ ಕ್ರಮವಾಗಿ 48/45 ವರ್ಷ ವಯಸ್ಸಿನೊಳಗಿರಬೇಕು.
2. ಎರಡು ವರ್ಷಗಳ ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು.
3. ಕೆ.ಸಿ.ಎಸ್ ಉಪನಿಯಮ(7) ರನ್ವಯ ಉನ್ನತ ವ್ಯಾಸಂಗಕ್ಕೆ ಒಂದು ಬಾರಿ ಮಾತ್ರ ನಿಯೋಜನೆಯ

ಸೌಲಭ್ಯವನ್ನು ಪಡೆಯಬಹುದಾಗಿದೆ.

4. ಉಪನಿಯಮ(4)ರನ್ವಯ ಉನ್ನತ ವ್ಯಾಸಂಗಕ್ಕಾಗಿ ಬೋಧಕ ವರ್ಗದವರನ್ನು ಸದರಿಯವರ ಕೇಡರಿನ, ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆಯ ಶೇಕಡ 5 ನ್ನು ಮೀರದಂತೆ ನಿಯೋಜಿಸಲಾಗುವುದು.
5. ಬೋಧಕ ವರ್ಗದವನ್ನು ಉಪನಿಯಮ(5)ರನ್ವಯ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಉನ್ನತ ವ್ಯಾಸಂಗಕ್ಕೆ ನಿಯೋಜಿಸಲಾಗುವುದು.
6. ಪೂರ್ಣಕಾಲಿಕ ನೆಲೆಯಲ್ಲಿ ಎಂ.ಟೆಕ್/ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಬೋಧಕ ವರ್ಗದವನ್ನು ಪ್ರಸ್ತಾವನೆಯನ್ನು ಇಲಾಖೆಯ ಅನುಮೋದನೆಗಾಗಿ ಸಲ್ಲಿಸುವಾಗ, ಸಂಸ್ಥೆಯ ಪ್ರಾಚಾರ್ಯರು ಸೂಕ್ತ ಶಿಫಾರಸ್ಸಿನೊಂದಿಗೆ ಎಲ್ಲಾ ದಾಖಲೆಗಳನ್ನು/ ಮಾಹಿತಿಗಳನ್ನು ದೃಢೀಕರಿಸಿ ಸಲ್ಲಿಸಬೇಕು.
7. ಎಂ.ಟೆಕ್/ಪಿಹೆಚ್.ಡಿ ಉನ್ನತ ವ್ಯಾಸಂಗವನ್ನು ಮಾಡಲು ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು/ಸಂದರ್ಶನಕ್ಕೆ ಹಾಜರಾಗಲು ನೀಡುವ ನಿರಾಕ್ಷೇಪಣಾ ಪತ್ರವೇ ಅಂತಿಮ ಅನುಮತಿ ಪತ್ರ ಎಂದು ಪರಿಗಣಿಸಬಾರದು.
8. ಪೂರ್ಣಕಾಲಿಕ ನೆಲೆಯ ಎಂ.ಟೆಕ್/ಪಿಹೆಚ್.ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಬೋಧಕ ವರ್ಗದವರು ಇಲಾಖೆಯ/ಸರ್ಕಾರದ ಅನುಮತಿಯನ್ನು ಪಡೆದ ನಂತರವೇ ಪ್ರವೇಶ ಶುಲ್ಕವನ್ನು ಪಾವತಿಸಬೇಕು.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಇಡಿ 116 ಟಿಪಿಇ 2022 ದಿನಾಂಕ: 28-10-2022 ರನ್ವಯ ಸರ್ಕಾರಿ ಪಾಲಿಟೆಕ್ನಿಕ್‌ನ ಬೋಧಕ ವರ್ಗದವರಿಗೆ ಪೂರ್ಣಕಾಲಿಕ ನೆಲೆಯಲ್ಲಿ ಪಿಹೆಚ್ ಡಿ ಉನ್ನತ ವ್ಯಾಸಂಗಕ್ಕೆ ಅನುಮತಿ ಇರುವುದಿಲ್ಲ.

**ಜಂಟಿ ನಿರ್ದೇಶಕರು(ಸಿಡಿಸಿ).**

ಇವರಿಗೆ:

1. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್/ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು ಮತ್ತು ಬೋಧಕ ವರ್ಗದವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗಕ್ಕೆ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.